ಇಂಗ್ಲಿಷ್ ಮೂಲ: ಹೆರ್ನಾಂಡೊ ಟೆಲೆಜ್
ಕನ್ನಡಕ್ಕೆ: ಜೆ.ವಿ. ಕಾರ್ಲೊ

# ಬರೀ ನೊರೆ ಮಾತ್ರ

ನಾನು ನನ್ನ ನೆಚ್ಚಿನ ಕ್ಷೌರದ ಕತ್ತಿಯನ್ನು ಮಸೆಯುವುದರಲ್ಲೇ ತಲ್ಲೀನನಾಗಿದ್ದೆ. ಅವನು ಒಳಗೆ ಬಂದಿದ್ದು ಗೊತ್ತೇ ಆಗಲಿಲ್ಲ. ಅವನ ಗುರುತು ಹಿಡಿಯುತ್ತಿದ್ದಂತೆ ನಾನು ಕಂಪಿಸತೊಡಗಿದೆ. ಅದು ಅವನಿಗೆ ಗೊತ್ತಾಗಲಿಲ್ಲ. ನನ್ನ ತಲ್ಲಣ ಅವನಿಗೆ ಕಾಣದಿರಲೆಂದು ಕತ್ತಿಯನ್ನು ಮತ್ತೂ ಜೋರಾಗಿ ಮಸೆಯತೊಡಗಿದೆ. ಕತ್ತಿಯ ಅಂಚಿನ ಮೇಲೆ ಹಗೂರವಾಗಿ ನನ್ನ ಹೆಬ್ಬೆರಳನ್ನು ಸವರಿ ನೋಡಿಕೊಂಡೆ. ತೃಪ್ತಿಯಾಗಲಿಲ್ಲ. ಮತ್ತೊಮ್ಮೆ ಬೆಳಕಿಗೆ ಹಿಡಿದು ಪರೀಕ್ಷಿಸಿದೆ. ಅವನು ಸೊಂಟಕ್ಕೆ ಕಟ್ಟಿದ್ದ ಕಾಡತೂಸಿನ ಪಟ್ಟಿಯನ್ನು, ಮತ್ತು ಅದಕ್ಕೆ ನೇತು ಬಿದ್ದಿದ್ದ ಪಿಸ್ತೂಲನ್ನು ಕಪಾಟಿಗೆ ಹೊಡೆದಿದ್ದ ಮೊಳೆಗೆ ಸಿಕ್ಕಿಸಿ, ಅದರ ಮೇಲೆ ತನ್ನ ಟೊಪ್ಪಿಗೆಯನ್ನು ಕವುಚಿ ಹಾಕಿದ. ನಂತರವೇ ಅವನು ನನ್ನೆಡೆಗೆ ತಿರುಗಿದ್ದು. ಕುತ್ತಿಗೆಗೆ ಬಿಗಿದಿದ್ದ ಟೈಯನ್ನು ಸಡಿಲಗೊಳಿಸುತ್ತಾ, ''ಹತ್ತ್... ಎಂತಾ ದರಿದ್ರ ಸೆಕೆ ಕಣಯ್ಯ!... ಒಂದು ಒಳ್ಳೇ ಶೇವ್ ಮಾಡು ನೋಡುವಾ...'' ಎನ್ನುತ್ತಾ ಖಾಲಿ ಬಿದ್ದಿದ್ದ ಕುರ್ಚಿಯ ಮೇಲೆ ಆಸೀನನಾದ.

ಅವನ ಮುಖದ ಮೇಲೆ ಸುಮಾರು ನಾಲ್ಕು ದಿನಗಳ ಫಸಲು ಬೆಳೆದಿರಬಹುದೆಂದು ಊಹಿಸಿದೆ. ಅವನು ನಮ್ಮ ಹುಡುಗರ ಜಾಡು ಹಿಡಿದು ಶಿಕಾರಿಗೆ ಹೋಗಿದ್ದ ಆ ನಾಲ್ಕು ದಿನಗಳು! ಅವನ ಮುಖ ರಣ ಬಿಸಿಲಿಗೆ ಸುಟ್ಟು ಕರಕಲಾಗಿತ್ತು. ನಾನು ತುಂಬಾ ಎಚ್ಚರದಿಂದ ಸೋಪಿನ ಕೆಲವಷ್ಟು ತುಣುಕುಗಳನ್ನು ಹೆರೆದು ಬೋಗುಣಿಯೊಳಗೆ ಹಾಕಿ, ತುಸು ಬೆಚ್ಚಗಿನ ನೀರನ್ನು ಸುರಿದು ಬ್ರಶ್ ಆಡಿಸತೊಡಗಿದೆ. ಬೋಗುಣಿಯೊಳಗೆ ನೊರೆ ತುಂಬತೊಡಗಿತು.

"ನನ್ನ ತಂಡದ ಇತರೆ ಹುಡುಗರ ಮುಖದಲ್ಲೂ ಇಷ್ಟೇ ಕಳೆ

